Date : 29-9-2015

# ಸರಕಾರದಿಂದ 2015–16 ನೇ ಸೀಜನ್‌ನಲ್ಲಿ 81.09 ಲಕ್ಷ ಟನ್ ಸಾಸಿವೆ ಬೆಳೆಯುವ ಗುರಿ

**2015–16ನೇ ಸೀಜನ್‌ನಲ್ಲಿ ಭಾರತ ಸರಕಾರ 81.09 ಲಕ್ಷ ಟನ್ ಸಾಸಿವೆ ಉತ್ಪಾದಿಸುವ ಗುರಿ ಹೊಂದಿದೆಯೆನ್ನಲಾಗಿದೆ. ಹಿಂದಿನ ವರ್ಷದಲ್ಲಿ 63.09 ಲಕ್ಷ ಟನ್‌ಗಳಷ್ಟು ಸಾಸಿವೆ ಉತ್ಪಾದಿಸಲಾಗಿದ್ದು, ಇದು ಹಿಂದಿನ ಏಳು ವರ್ಷಗಳಲ್ಲೇ ಅತೀ ಕನಿಷ್ಟವೆನ್ನಲಾಗಿದೆ. ಈ ವರ್ಷ ಸುಮಾರು ಇದಕ್ಕಿಂತ 29 ಶೇಕಡಾ ಹೆಚ್ಚು ಸಾಸಿವೆ ಉತ್ಪಾದಿಸುವ ಗುರಿ ಹೊಂದಲಾಗಿದೆ.**

**ಕೃಷಿ ಮಂತ್ರಾಲಯದ ಇತ್ತೀಚಿನ ದಾಖಲೆಗಳ ಪ್ರಕಾರ ಮುಂದಿನ ರಾಬಿ ಸೀಜನ್‌ನಲ್ಲಿ ಹಿಂದಿನ ವರ್ಷದ ಒಟ್ಟು ತೈಲ ಬೀಜದ ಉತ್ಪಾದನೆಗಿಂತ ಸುಮಾರು 32 ಶೇಕಡಾ ಹೆಚ್ಚಳವಾಗಿ 110 ಲಕ್ಷ ಟನ್ ತೈಲ ಬೀಜ ಉತ್ಪಾದಿಸುವ ಗುರಿ ಹೊಂದಲಾಗಿದೆ. ಸಾಸಿವೆ ಉತ್ಪಾದನೆ ಸಾಮಾನ್ಯವಾಗಿ ರಾಬಿ ಸೀಜನ್‌ನಲ್ಲಿ ಇತರ ತೈಲ ಬೀಜಗಳಿಗಿಂತ ಹೆಚ್ಚಳವಾಗಿರುತ್ತದೆ. ಸರಕಾರ ಈ ರಾಬಿ ಸೀಜನ್‌ನಲ್ಲಿ 18.90 ಲಕ್ಷ ಟನ್ ನೆಲಗಡಲೆ, 6.18 ಲಕ್ಷ ಟನ್‌ಗಳ ಸೂರ್ಯಕಾಂತಿ ಹಾಗೂ 1.83 ಲಕ್ಷ ಟನ್ ಸಫ್ಲೋವರ್ ಉತ್ಪಾದಿಸುವ ಗುರಿ ಹೊಂದಿದೆಯೆನ್ನಲಾಗಿದೆ.**

quickmarketreports.com